
# ಸಂತರ ಜೀವನ ಕಥೆ : 'ಬಾಳಿನ ದೀಪಗಳು'

ನಮ್ಮ ದೇಶದಲ್ಲಿ ಆದರ್ಶವ್ಯಕ್ತಿಗಳೇ ಸಾಧುಸಂತರುಗಳು; ಅವರ ಸ್ಫೂರ್ತಿಯುತ ಜೀವನದಿಂದ ಪ್ರೇರಣೆ ಪಡೆದು ಬದುಕನ್ನು ಸಾರ್ಥಕಗೊಳಿಸಿಕೊಂಡ ಅನೇಕ ಉದಾಹರಣೆಗಳು ನಮಗೆ ದೊರೆಯುತ್ತವೆ. ಈ ಹಿನ್ನೆಲೆಯಲ್ಲಿ ಹೊಸದಾಗಿ ಪ್ರಕಟವಾದ ಗ್ರಂಥ **'ಬಾಳಿನ ದೀಪಗಳು'**, ೩೬ ಮಂದಿ ಭಾರತೀಯ ಸಂತರ ಸಂಕ್ಷಿಪ್ತ ಜೀವನಚಿತ್ರಗಳನ್ನು ನೀಡುತ್ತದೆ. ಮೈಸೂರು ಶ್ರೀರಾಮಕೃಷ್ಣ ಆಶ್ರಮದಿಂದ ಪ್ರಕಟವಾಗಿರುವ ಈ ಕೃತಿಯು 'ವಿವೇಕಪ್ರಭ' ಮಾಸಪತ್ರಿಕೆಯಲ್ಲಿ ಪ್ರಕಟವಾಗಿದ್ದ ಹಲವು ಸಂತರ ಜೀವನಚಿತ್ರಗಳ ಹಾಗೂ ಹೊಸದಾಗಿ ಸೇರಿಸಲಾದ ಕೆಲವು ಲೇಖನಗಳ ಸಂಕಲನವಾಗಿದೆ. ಲೇಖಕರಾದ ಸ್ವಾಮಿ ವೀರೇಶಾನಂದರು 'ವಿವೇಕಪ್ರಭ' ಮಾಸಪತ್ರಿಕೆಯ ಹಿಂದಿನ ಸಂಪಾದಕರು; ಸುಲಲಿತವಾದ ಬರಹಗಳಿಗೆ ಪ್ರಸಿದ್ಧರಾದವರು. ಸಂತರ ಬದುಕನ್ನು ಕಟ್ಟಿಕೊಡುವಲ್ಲಿ ಅವರ ಅಪಾರ ಪರಿಶ್ರಮ ಹಾಗೂ ತಾಳ್ಮೆ ಎದ್ದು ಕಾಣುವಂತಿದೆ.




**ಕೃತಿ:** ಬಾಳಿನ ದೀಪಗಳು
**ಲೇಖಕರು :** ಸ್ವಾಮಿ ವೀರೇಶಾನಂದ
**ಪ್ರಕಾಶನ :** ಶ್ರೀರಾಮಕೃಷ್ಣ ಆಶ್ರಮ
ಯಾದವಗಿರಿ, ಮೈಸೂರು- 570020
ಮೊ.: 0821-2417444, 2412424
**ಬೆಲೆ:** 100/- **ಪುಟ:** 224

ಡಾ. ಸಿ.ಪಿ.ಕೆ.ಯವರ ಮುನ್ನುಡಿ ಅತ್ಯಂತ ಸಂಕ್ಷಿಪ್ತವಾಗಿದ್ದರೂ, ಅರ್ಥಗರ್ಭಿತವಾಗಿದೆ. ಅಲ್ಲಿನ ಕೆಲವು ವಾಕ್ಯಗಳು ಹೀಗಿವೆ: ''ಸ್ವಾಮಿ ವೀರೇಶಾನಂದ ವಿರಚಿತ 'ಬಾಳಿನ ದೀಪಗಳು' ಕೇವಲ ದೀಪಗಳಲ್ಲ; ಹತ್ತೂ ದಿಕ್ಕುಗಳಿಗೆ ಬೆಳಕುಚೆಲ್ಲುವ ದಿವ್ಯ ದೀಪಸ್ತಂಭಗಳು; ಅಮೃತಕುಂಭಗಳು!'' ಇನ್ನೊಂದೆಡೆ, ''ಇಡೀ ಭರತಖಂಡವೆ ಈ ಮಹಾತ್ಮರ ಆಡೊಂಬಲ; ದೇಶಸಂಕ್ಷೇಪವೆ ಇಲ್ಲಿದೆ. ಅವರನ್ನು ಆಯ್ದುಕೊಳ್ಳುವಲ್ಲಿ ಅವರ ಸಾಧನೆ ಸಿದ್ಧಿಗಳ ವಿನಾ ಮತ್ತಾವ ಅಳತೆಗೋಲೂ ಇಲ್ಲ. ಅವರು ಅನಿಕೇತನ ಚೇತನರು!'' ಗ್ರಂಥದ ಮಹಿಮೆಯನ್ನು ಸಾರಲು ಈ ನುಡಿಗಳೇ ಸಾಕು.

ಈ ಕೃತಿಯ ಮಹತ್ವವನ್ನು ಇನ್ನೂ ಕೆಲವು ಅಂಶಗಳೊಂದಿಗೆ ಗುರುತಿಸಬಹುದು:

೧) ಅಸ್ಸಾಮಿನ ಶಂಕರದೇವ, ಗುಜರಾತಿನ ನರಸೀ ಮೆಹ್ತಾ, ಕಾಶ್ಮೀರದ ಲಲ್ಲೇಶ್ವರಿ, ಯೋಗಿ ವೇಮನ ಮುಂತಾದವರ ಜೀವನ ವಿವರಗಳು ನಮಗೆ ಹೆಚ್ಚಾಗಿ ತಿಳಿದಿಲ್ಲ; ಅವರ ಜೀವನಚಿತ್ರಗಳು ಇಲ್ಲಿ ಅಪರೂಪದವು.

೨) ಹೆಚ್ಚು ಪ್ರಸಿದ್ಧರಾದ ಪುರಂದರದಾಸರು, ಅಲ್ಲಮಪ್ರಭು, ಆಂಡಾಳ್, ತುಲಸೀದಾಸ, ಸಮರ್ಥ ರಾಮದಾಸ, ಮೀರಾಬಾಯಿ ಮುಂತಾದವರ ಜೀವನಚಿತ್ರಗಳೂ ಇಲ್ಲಿ ಸೇರಿರುವ ಕಾರಣ, ಈ ಸಂತರ ಜೀವನ ಸಂಕಲನಕ್ಕೆ ಒಂದು ಸಮಗ್ರತೆ ಒದಗಿಬಂದಿದೆ.

೩) ಸುಲಲಿತವಾದ ಶೈಲಿ. ಓದುಗರ ಮನಸೂರೆಗೊಳ್ಳುವಂತೆ ಚಿಕ್ಕ ವಾಕ್ಯಗಳು, ಪದಗುಚ್ಛಗಳು ಹಾಗೂ ಸಂಭಾಷಣೆ, ಸಂವಾದ ಮುಂತಾದುವುಗಳ ಬಳಕೆ. ಸಂತರ ಜೀವನ ಹೇಗೋ ಹಾಗೆ ಅವರ ವಾಣಿ, ಉಪದೇಶಗಳಿಗೂ ಇಲ್ಲಿ ಮಹತ್ವ ನೀಡಲಾಗಿದೆ.

೪) ಪ್ರತಿಯೊಬ್ಬ ಸಂತನ ಚಿತ್ರಗಳನ್ನೂ ಶೀರ್ಷಿಕೆಯೊಂದಿಗೆ ಸಣ್ಣ ಗಾತ್ರದಲ್ಲಿ ನೀಡಲಾಗಿದೆ; ಇದು ಓದುಗರಿಗೆ ಸಂತರ ಚಿತ್ರವನ್ನು ಕಣ್ಣ ಮುಂದೆ ಚಿತ್ರಿಸಲು ಅನುಕೂಲವಾಗುವಂತಿದೆ. ಆದರೆ ಚಿತ್ರಗಳ ಗಾತ್ರ ತುಂಬ ಚಿಕ್ಕದು; ಇನ್ನಷ್ಟು ದೊಡ್ಡದಾಗಿರಬೇಕಿತ್ತು ಅನ್ನಿಸುತ್ತದೆ.

ಲೇಖಕರ ನಿರೂಪಣೆಯ ಶೈಲಿಗೆ ಒಂದು ಉದಾಹರಣೆ: ''ಹನುಮಂತನ ಮಾರ್ಗದರ್ಶನದಂತೆ ತುಲಸೀದಾಸರು ಚಿತ್ರಕೂಟದಲ್ಲಿರುವ ರಾಮಘಾಟ್ ಎಂಬಲ್ಲಿ ಒಂದು ಆಶ್ರಮವನ್ನು ನಿರ್ಮಾಣ ಮಾಡಿದರು. ಅಲ್ಲಿ ನೆಲೆಸಲು ಆರಂಭಿಸಿದರು. ಒಮ್ಮೆ ಕಮದಗಿರಿ ಎಂಬ ಪುಣ್ಯಪರ್ವತವನ್ನು ಪ್ರದಕ್ಷಿಣೆ ಮಾಡುತ್ತಿದ್ದರು. ಮಾರ್ಗಮಧ್ಯದಲ್ಲಿ ಸುಂದರರೂಪರಾದ ಇಬ್ಬರು ರಾಜಕುಮಾರರನ್ನು ನೋಡಿದರು. ಒಬ್ಬನ ಬಣ್ಣ ನೀಲಿ. ಇನ್ನೊಬ್ಬನ ಬಣ್ಣ ಬಿಳಿಪು. ಇಬ್ಬರೂ ಪೀತಾಂಬರಧಾರಿಗಳಾಗಿದ್ದರು; ಕುದುರೆಗಳ ಮೇಲೆ ಕುಳಿತಿದ್ದರು. ತುಲಸೀದಾಸರು ಈ ದೃಶ್ಯವನ್ನು ನೋಡಿ ಭಾವಾವಿಷ್ಟರಾದರು. ಆದರೆ ಅವರಿಗೆ ಈ ಯುವಕರನ್ನು ಗುರುತಿಸಲು ಆಗಲಿಲ್ಲ. ಅನಂತರ, ಹನುಮಂತನೇ ಈ ಬಗ್ಗೆ ಕೇಳಿದನು. 'ರಾಮ, ಲಕ್ಷ್ಮಣರನ್ನು ಕಂಡೆಯಾ ?' ಎಂದನು. ತುಲಸೀದಾಸರಿಗೆ ಬಹಳ ದುಃಖವಾಯಿತು. ಪಶ್ಚಾತ್ತಾಪದಿಂದ ನರಳಿದರು. ಮರುದಿನ ಬೆಳಗ್ಗೆ ರಾಮನ ದರ್ಶನವನ್ನು ಮಾಡಿಸುವೆನೆಂದು ಹನುಮಂತನು ಆಶ್ವಾಸನೆ ಕೊಟ್ಟನು; ತುಲಸೀದಾಸರನ್ನು ಸಾಂತ್ವನಗೊಳಿಸಿದನು.'' ನಮ್ಮ ಬಾಳಿಗೆ ಬೆಳಕಾಗುವ ಸಂತರ ಜೀವನ ಚಿತ್ರಗಳನ್ನೊಳಗೊಂಡ ಈ ಕೃತಿ ಸಂಗ್ರಹಯೋಗ್ಯವಾಗಿದೆ.